ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೩ನೇ ಏಪ್ರಿಲ್ ೧೯೮೭/ಚೈತ್ರ ೧೩, ೧೯೦೯ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ೨-೫೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿವಠಾತಿನ ಮೂಲಕ ನೀಡಲಾದ ಉತ್ತರಗಳು

೧ ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಶಿವನಂಜೇಗೌಡರು ಈ ದಿವಸ ಬೆಳ್ಳಿಗೆ ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ೧೯೪೫ ರಿಂದ ೧೯೪೭ರವರೆಗೆ ಅವರು ಮೈಸೂರು ಪ್ರಜಾಪ್ರತಿನಿಧಿಸಭಾ ಸದಸ್ಯರಾಗಿದ್ದರು ೧೯೫೨ ರಿಂದ ೧೯೫೭ರವರೆಗೆ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ನಿಧನ ಹೊಂದಿದ ಸದಸ್ಯರ ಆತ್ಮಕ್ಕೆ ಶಾಂತಿ ಕೋರುವ ಸಲುವಾಗಿ ಎಲ್ಲರೂ ಒಂದು ನಿಮಿಷ ಕಾಲ ಎದ್ದು ನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಕಾಲ ಮೌನವನ್ನು ಆಚರಿಸಿದರು)

ಈ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯವನ್ನು ಮೃತರ ಕುಟುಂಬದ ಸದಸ್ಯರಿಗೆ ಕಳುಹಿಸಿಕೊಡಲಾಗುವುದು.

೨ ಪ್ರಕಟಣೆಗಳು

MESSAGE FROM THE LEGISLATIVE COUNCIL

MR. SPEAKER.

I have received the following message from the Chairman, Legislative Council.

"As required by Rule 114 of the Rules of Procedure and Conduct of Business in Karnataka Legislative Council, I transmit the following Bill which have been agreed to by the Karnataka Legislative Council on 2nd April, 1987 without amendments.

1. The Public Wakfs (Extension of Limitation) (Karnataka Amendment) Bill, 1987.